# GATWU

Reg No. ALCB-4/DRT/CUA/18/2005-06

**Garments and Textile Workers Union**

ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್

*(Affiliated to New Trade Union Initiative - NTUI)*


ದಿನಾಂಕ: 05.12.2017

ಗೆ,

ಉಪ ಕಾರ್ಮಿಕ ಆಯುಕ್ತರು ಹಾಗೂ

ಸಂಧಾನಾಧಿಕಾರಿಗಳು, ವಿಭಾಗ–1

ಕಾರ್ಮಿಕ ಭವನ,

ಬನ್ನೇರು ಘಟ್ಟ ರಸ್ತೆ, ಬೆಂಗಳೂರು

ಮಾನ್ಯರೇ,

ವಿಷಯ: ಏವರಿ ಡೆನಿಸನ್ ಇಂಡಿಯಾ ಪ್ರೈ ಲಿ. ಆಡಳಿತವರ್ಗವು ಸಂಧಾನ ಪ್ರಕ್ರಿಯೆ ಜಾರಿಯಲ್ಲಿರುವಾಗ ಕಾರ್ಮಿಕರನ್ನು ಕೆಲಸದಿಂದ ವಜಾಗೊಳಿಸುತ್ತಿರುವ ಬಗ್ಗೆ

ಉಲ್ಲೇಖ: ವಿವಾದ ಸಂಖ್ಯೆ 93/2017–2018

----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಏವರಿ ಡೆನಿಸನ್ ಇಂಡಿಯಾ ಪ್ರೈ.ಲಿ ನಲ್ಲಿ ಕೆಲಸ ಮಾಡುತ್ತಿರುವ ಗುತ್ತಿಗೆ ಕಾರ್ಮಿಕರ ಸೇವೆಯನ್ನು ಖಾಯಂ ಗೊಳಿಸುವಂತೆ ತಮ್ಮ ಸಮ್ಮುಖದಲ್ಲಿ ವಿವಾದವನ್ನು ದಾಖಲಿಸಿರುತ್ತೇವೆ. ಅದರಂತೆ ದಿನಾಂಕ 2.11.2017 ರಿಂದ ಸಂಧಾನ ಪ್ರಕ್ರಿಯೆ ಪ್ರಾರಂಭವಾಗಿರುತ್ತದೆ.

ಆದರೆ ದಿನಾಂಕ 6.11.2017 ರಂದು ಏವರಿ ಡೆನಿಸನ್ ಇಂಡಿಯಾ ಪ್ರೈ.ಲಿ ನ ಆಡಳಿತವರ್ಗದವರು 39 ಮಂದಿ ಕಾರ್ಮಿಕರನ್ನು ಕೆಲಸದಿಂದ ವಜಾಗೊಳಿಸಿರುತ್ತಾರೆ. (ಈ ಪತ್ರದೊಂದಿಗೆ ಈ ಪಟ್ಟಿಯನ್ನು ಲಗತ್ತಿಸಲಾಗಿದೆ)

ಆಡಳಿತ ಮಂಡಳಿಯವರು ಈ ಪ್ರಕ್ರಿಯೆಯನ್ನು ನಿರಂತರವಾಗಿ ಮುಂದುವರೆಸುತ್ತಿದ್ದು, ದಿನಾಂಕ 02.12.2017 ರಂದು,

| | |
|---|---|
| ನಾಗೇಂದ್ರ ಕುಮಾರ್ | ID ಸಂಖ್ಯೆ 5773, |
| ಪ್ರಜ್ವಲ್ | ID ಸಂಖ್ಯೆ 6858, |
| ಅಶೋಕ್ ಎ.ಎಸ್ | ID ಸಂಖ್ಯೆ 6850, |
| ಅಜಿತ್ ಕುಮಾರ್ | ID ಸಂಖ್ಯೆ 6025 |

ಈ ಕಾರ್ಮಿಕರಿಗೆ 15.12.2017 ರಿಂದ ನಿಮ್ಮ ಪಂಚಿಂಗ್ ರದ್ದಾಗುತ್ತದೆ, ನಂತರ ನಿಮಗೆ ಇಲ್ಲಿ ಕೆಲಸ ಇರುವುದಿಲ್ಲ ಎಂದು ಮೌಖಿಕವಾಗಿ ಕಾರ್ಮಿಕರಿಗೆ ಬೆದರಿಕೆ ಒಡ್ಡುತ್ತಿದ್ದಾರೆ.

ತಮ್ಮ ಮುಂದೆ ಸಂಧಾನ ಪ್ರಕ್ರಿಯೆ ಜಾರಿಯಲ್ಲಿರುವಾಗ ಆಡಳಿತವರ್ಗವು ಕಾರ್ಮಿಕರನ್ನು ಹೀಗೆ ಬೆದರಿಸಿ, ಅವರನ್ನು ಕೆಲಸದಿಂದ ವಜಾಗೊಳಿಸುವುದು ಕಾನೂನು ಬಾಹಿರ ಕ್ರಮವಾಗುತ್ತದೆ.

ಸಂಧಾನ ಪ್ರಕ್ರಿಯೆ ಜಾರಿಯಲ್ಲಿರುವಾಗ ವಜಾಗೊಳಿಸಿರುವ 39 ಕಾರ್ಮಿಕರನ್ನು ತಕ್ಷಣವೇ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಹಾಗೂ ಸಂಧಾನ ಪ್ರಕ್ರಿಯೆ ಜಾರಿಯಲ್ಲಿರುವಾಗ ಕಾರ್ಮಿಕರಿಗೆ ಮೌಖಿಕವಾಗಿ ಬೆದರಿಕೆ ಒಡ್ಡಿ ಕೆಲಸದಿಂದ ತೆಗೆದು ಹಾಕುವ ಕ್ರಮವು ಕಾನೂನುಬಾಹಿರವೆಂದು ಲಿಖಿತ ಸೂಚನೆ ನೀಡಿ ಈ ರೀತಿಯ ಯಾವುದೇ ಕ್ರಮಕ್ಕೆ ಮುಂದಾಗಬಾರದೆಂದು ಆಡಳಿತವರ್ಗಕ್ಕೆ ಸೂಚಿಸಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇವೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

ಪ್ರತಿಭಾ

ಪ್ರಧಾನ ಕಾರ್ಯದರ್ಶಿ

560 029



[redacted]